ವಿಜಾಪುರ ಜಿಲ್ಲೆಯ ಪಶು ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು

371(675) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ವಿಜಾಪುರ ಜಿಲ್ಲೆಯ ಕಾಖಂಡಕಿ ಮತ್ತು ಉಕ್ಕಲಿ ಪಶು ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ. ಆಲಮಟ್ಟಿ ಯೋಜನೆಯಡಿಲ್ಲಿ ಮುಳಗಡೆಯಾಗಿರುವ ಬಾಗೇವಾಡಿ ವಿಧಾನಸಭಾ ಕ್ಷೇತ್ರದ 18 ಹಳ್ಳಿಗಳಲ್ಲಿ ಹೊಸ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ;

ಇ. ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಈ ವಿಷಯದಲ್ಲಿ ಇನ್ನೂ ನಿರ್ಣಯವನ್ನು ಕೈಗೊಂಡಿರುವುದಿಲ್ಲ.

ಆ. ಪಶು ಆಸ್ಪತ್ರೆಗಳನ್ನು ಹೊಸ ನಿರ್ವೇಶನಗಳಿಗೆ ಸ್ಥಳಾಂತರಗೊಳಿಸಿದೆ, ಹೊರತು ಹೊಸ ಆಸ್ಪತ್ರೆಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಇ. ಮೇಲಿನ 'ಆ 'ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ನಾಗಮಂಗಲ ತಾಲ್ಲೂಕಿನ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ

372(505) ಶ್ರೀ ಚಲುವರಾಯಸ್ವಾಮಿ ಎನ್.(ನಾಗಮಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2001-02ನೇ ಸಾಲಿನಲ್ಲಿ ನಾಗಮಂಗಲ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆ ಇಲಾಖೆಯಿಂದ ಯಾವ ಯಾವ ಕೈಗಾರಿಕೆಗಳಿಗೆ ಸಬ್ಸಿಡಿ (ಸಹಾಯಧನ) ನೀಡಲಾಗಿದೆ: (ವಿವರ ಒದಗಿಸುವುದು)

ಆ. ಸಹಾಯಧನ ಮಂಜೂರಾಗಿದ್ದರೂ ಬಿಡುಗಡೆ ಮಾಡದೇ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ. 2001-02ನೇ ಸಾಲಿನಲ್ಲಿ ನಾಗಮಂಗಲ ತಾಲ್ಲೂಕಿನ ಈ ಕೆಳಕಂಡ 2 ಕೈಗಾರಿಕೆ ಘಟಕಗಳಿಗೆ ಮಂಜೂರಾದ ಸಹಾಯಧನದಲ್ಲಿ ಶೇ 50ರಷ್ಟು ಬಿಡುಗಡೆ ಮಾಡಲಾಗಿದೆ.

1. ಮೇ: ವಿಜಯ ಟೈರ್ ವರ್ಕ್ಸ್, ಬಿ.ಎಂ.ರಸ್ತೆ, ಬೆಳ್ಳೂರು ಕ್ರಾಸ್; ನಾಗಮಂಗಲ ರೂ.72, 100.

2. ಮೇ: ಲಕ್ಷ್ಮೀನಾರಸಿಂಹಸ್ವಾಮಿ ಫ್ಲೋರ್ ಮಿಲ್, ಮಲ್ಲನಾಯಕನಹಳ್ಳಿ ಗ್ರಾಮ, ನಾಗಮಂಗಲ, ರೂ.11,500.

ಆ. ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆರ್ಥಿಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆರ್ಥಿಕ ಇಲಾಖೆಯ ಜೊತೆಗೆ, ಚರ್ಚೆ ನಡೆಸಲಾಗುತ್ತಿದೆ.